ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT :

ಪತ್ರಿಕೆಯ ಹೆಸರು : NAME OF THE NEWS PAPER : ದಿನಾಂಕ : DATE :

# ಅಶಿಸ್ತಿಗೆ ಸ್ಪೀಕರ್ ರೋಷಾವೇಷ

- ನಿಮ್ ರಾಜಕಾರಣನಾ ಹೊರಗೆ ಮಾಡಿ
- ವಿಧಾನಸಭೆ ಪ್ರಜಾಪ್ರಭುತ್ವದ ದೇಗುಲ

ವಿಧಾನಸಭೆ: ಅಂಕೆ ಇಲ್ಲದ ಸದನವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಆಗಾಗ್ಗೆ ಚಾಟಿ ಬೀಸುವ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಮಂಗಳವಾರ ಅಕ್ಷರಶಃ ಕುದಿಯುತ್ತಿದ್ದರು. ಇದಕ್ಕೆ ಕಾರಣ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರು ನಿರಂತರ ಮನವಿಗೆ ಸ್ಪಂದಿಸದೆ ಪ್ರತಿಭಟನೆ ನಡೆಸಿದ ಪ್ರಸಂಗ. ಕೊನೆಗೂ ನಿಯಮದಂತೆ ಕಲಾಪ ನಿರ್ವಹಿಸಿದ ಸ್ಪೀಕರ್ ರಾಜಕೀಯ ಅನುಭವ ಮತ್ತು ಸಂವಿಧಾನಿಕ ಅಧಿಕಾರ ಬಳಸಿ ಆಡಿದ ಕಿಡಿನುಡಿಗಳು ಶಾಸನಸಭೆಯನ್ನು ಚಕಿತಗೊಳಿದ್ದಂತೂ ದಿಟ.

ಈ ಸಭಾಧ್ಯಕ್ಷರ ಸ್ಥಾನ ಬಹಳಷ್ಟು ಮಂದಿ ಸ್ಪೀಕರ್‌ಗಳನ್ನು ಕಂಡಿದೆ. ಒಬ್ಬೊಬ್ಬರ ಒಂದೊಂದು ರೀತಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಯಾರ್‍ಯಾರ ಅವಧಿಯಲ್ಲಿ ಏನೇನು ಮಾಡಿದ್ದಾರೆ ಎಂಬುದು ಗೊತ್ತಿದೆ. ಎಲ್ಲವೂ ಸದನಸ ಇತಿಹಾಸ ಪುಟ ಸೇರಿವೆ. ಯಾವ್ಯಾವ ಸಂದರ್ಭಗಳಲ್ಲಿ ಏನೇನು ನಿರ್ಣಯ ಮಾಡಬೇಕೆಂಬುದು ನನಗೆ ಚೆನ್ನಾಗಿಯೇ ತಿಳಿದಿದೆ ಎಂದು ಏರುಧ್ವನಿಯಲ್ಲೇ ಉದ್ಘರಿಸಿದವರು ಸ್ಪೀಕರ್ ಕಾಗೇರಿ ಅವರು.

ಸಂಸದೀಯ ಮೌಲ್ಯಗಳನ್ನು ಹೆಚ್ಚಿಸಬೇಕಾದ ವಿಧಾನಸಭೆ ಪ್ರಜಾತಂತ್ರದ ದೇಗುಲ ಇದ್ದಂತೆ. ರಾಜ್ಯದ ಜನತೆಯ ಭಾವನೆಗಳನ್ನು ಗೌರವಿಸಬೇಕಿದೆ. ಹಾಗಾಗಿಯೇ ನಮ್ಮನ್ನಿಲ್ಲಿಗೆ ಆರಿಸಿ ಕಳಿಸಿದ್ದಾರೆ. ಪ್ರತಿಪಕ್ಷದವರಿಗೂ ಹೊಣೆಗಾರಿಕೆ ಇದೆ. ಒಂದು ದೇಶ-ಒಂದು ಚುನಾವಣೆ ಚರ್ಚೆಗೂ ನೀವು ಸಿದ್ದರಿಲ್ಲ. ಹಕ್ಕುಚ್ಯುತಿ ವಿಷಯ ಚರ್ಚೆಗೂ ತಯಾರಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಒಳ್ಳೆ ಬೆಳವಣಿಗೆ ಅಲ್ಲವೇ ಅಲ್ಲ. ಹತ್ತಾರು ವರ್ಷಗಳ ಕಾಲ ಶಾಸನಸಭೆ ಸದಸ್ಯರಾಗಿರೋ ನೀವೇ ಹೀಗೆ ಮಾಡಿದ್ರೆ, ಇದೇನಾ ನಾವು ಹೊಸಬರಿಗೆ ಕೊಡುವ ಮಾದರಿ ಉಡುಗೆ ಎಂದೂ ಮನದಾಳದ ಆಕ್ರೋಶವನ್ನು ಸ್ಪೀಕರ್ ಹೊರಹಾಕಿದರು.

ಯಾರು ಏನೇ ಅಡ್ಡಿ ಆತಂಕ ಉಂಟು ಮಾಡಿದರೂ ಈ ಸ್ಥಾನದಲ್ಲಿ ನಾನು ಇರೋವರೆಗೆ ಪೀಠದ ಗೌರವ ಕಾಪಾಡ್ತೇನೆ. ಒಂದಿನಿಯೂ ಧಕ್ಕೆಯಾಗಲು ಅವಕಾಶ ಕೊಡುವುದಿಲ್ಲ. ನಾನೂ ಕೂಡಾ ದಶಕಗಳ ಕಾಲ ಶಾಸಕನಾಗಿ, ಮಂತ್ರಿಯಾಗಿಯೂ ಕೆಲಸ ಮಾಡಿದ್ದೇನೆ. ಆದರೆ ಸದನದಲ್ಲಿ ಇಂತಹ ನಡವಳಿಕೆ ಸರಿಯಲ್ಲ. ಪ್ರತಿಭಟನೆ ಹಕ್ಕು ಆದರೆ ಅದು ದುರ್ಬಳಕೆ ಆಗಬಾರದು ಎನ್ನುವ ಕಿವಿಮಾತು ಕಾಗೇರಿಯವರದ್ದಾಗಿತ್ತು. ನಿಮ್ಮ ರಾಜಕಾರಣದಿಂದಲೇ ಸಭಾಧ್ಯಕ್ಷ ಪೀಠಕ್ಕೆ ಅಗೌರವವಾಗಿದೆ. ಬೇಜವಾಬ್ದಾರಿ ರಾಜಕಾರಣ ಸರಿಯಲ್ಲ. ರಾಜಕಾರಣ ಮಾಡುವ ಹಾಗಿದ್ರೆ ಸದನದಿಂದ ಹೊರಗೆ ಮಾಡಿ. ಯಾವುದೇ ಕಾರಣಕ್ಕೂ ನಿಯಮ ಮೀರಿದ

ನಡವಳಿಕೆಗಳಿಗೆ ನನ್ನ ಅವಧಿಯಲ್ಲಿ ಅವಕಾಶ ಸಿಗುವುದಿಲ್ಲ. ಗಮನದಲ್ಲಿಟ್ಟುಕೊಳ್ಳಿ ಎಂದು ಕಾವೇರಿದ ಕೋಪದಿಂದಲೇ ಕಾಗೇರಿಯವರು ಅಬ್ಬರಿಸಿದ್ದು ಮಾತ್ರ ಸ್ಪೀಕರ್ ಅವರ ಸೌಮ್ಯ ಸ್ವಭಾವದ ಮತ್ತೊಂದು ಮುಖವನ್ನು ಅನಾವರಣ ಮಾಡಿತು.

## ಪ್ರಶ್ನೋತ್ತರ ಕಲಾಪ

ಪ್ರಶ್ನೆ: ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳು ಕೇವಲ ಮೂರು ಜಿಲ್ಲೆಗಳಿಗೆ ಮೀಸಲಾಗಿವೆ. ಹೊಸದಾಗಿ ಪ್ರಾರಂಭಿಸುವ ಕೈಗಾರಿಕೆಗಳು ಬೇರೆ ಜಿಲ್ಲೆಗಳಲ್ಲಿ ಸ್ಥಾಪನೆಯಾಗುತ್ತವೆಯೇ?

■ **ಎಸ್.ವಿ. ಸಂಕನೂರ** | ಬಿಜೆಪಿ ಸದಸ್ಯ

ಉತ್ತರ: ರಾಜ್ಯದಲ್ಲಿ ಕೆಲವು ಕಡೆ ಕೈಗಾರಿಕೆಗಳು ಹೆಚ್ಚಿವೆ. ಹೊಸ ಕೈಗಾರಿಕಾ ನೀತಿಯಡಿ ಎರಡು, ಮೂರನೆ ದರ್ಜೆಯ ನಗರಗಳಲ್ಲೂ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶ ಮಾಡಿಕೊಡಲಾಗುತ್ತಿದೆ. ಕೊರೊನಾ ಸಂಕಷ್ಟದಲ್ಲೂ 2020ರಲ್ಲೂ 76,376 ಕೋಟಿ ರೂ.ಗಳನ್ನು ಹೂಡಿಕೆ ಮಾಡಲಾಗಿದೆ.

■ **ಜಗದೀಶ ಶೆಟ್ಟರ್** | ಕೈಗಾರಿಕೆ ಸಚಿವ

ಪ್ರಶ್ನೆ: ಸ್ಮಾರ್ಟ್ ಸಿಟಿ ಯೋಜನೆಯಡಿ ಬೆಳಗಾವಿ ನಗರದಲ್ಲಿ ನಡೆಯುತ್ತಿರುವ ಕಾಮಗಾರಿ ಕಳಪೆಯಾಗಿದೆ ಮಾತ್ರವಲ್ಲದೆ ವಿಳಂಬವೂ ಆಗುತ್ತಿದೆ. ಇದಕ್ಕೆ ಕಾರಣವೇನು?

■ **ಕವಟಗಿಮಠ ಮಹಾಂತೇಶ** | ಬಿಜೆಪಿ ಸದಸ್ಯ

ಉತ್ತರ: ಬೆಳಗಾವಿಯಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಪ್ರಗತಿಯಲ್ಲಿದೆ. ಕಳಪೆ ಎಂದು ಕಂಡುಬಂದಲ್ಲಿ ಮರು ಕಾಮಗಾರಿ ಮಾಡಿಸಲಾಗುವುದು. ಈಗಾಗಲೇ ತಿಳಿಸಿರುವಂತೆ ನಿಗದಿತ ವೇಳೆಯಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ.

■ **ಬೈರತಿ ಬಸವರಾಜ್** | ನಗರಾಭಿವೃದ್ಧಿ ಸಚಿವ

ಪ್ರಶ್ನೆ: ಬೆಂಬಲ ಬೆಲೆಯಡಿ ರೈತರಿಂದ ಖರೀದಿ ಮಾಡಲಾಗಿರುವ ಭತ್ತಕ್ಕೆ ಬಾಕಿ ಯಾವಾಗ ನೀಡುತ್ತೀರಿ. ಹೆಚ್ಚುವರಿಯಾಗಿ ಮೂರು ತಿಂಗಳ ಕಾಲ ಅಕ್ಕಿ ದಾಸ್ತಾನು ಮಾಡಿದ್ದಕ್ಕೆ ಅದರ ಬಾಡಿಗೆ ಸರ್ಕಾರ ಕೊಡುವುದಿಲ್ಲವೆ

■ **ಮರಿತಿಬ್ಬೇಗೌಡ** | ಜೆಡಿಎಸ್ ಸದಸ್ಯ

ಉತ್ತರ: ಕನಿಷ್ಠ ಬೆಂಬಲ ಯೋಜನೆಯಡಿ ಖರೀದಿಸಲಾಗಿರುವ ಭತ್ತಕ್ಕೆ 93 ಕೋಟಿ ಬಾಕಿ ಪಾವತಿಸಬೇಕಿದೆ ಅದನ್ನು ಇನ್ನು 2 ವಾರದೊಳಗೆ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು. ಗೋದಾಮಿನಲ್ಲಿ ಅಕ್ಕಿ ದಾಸ್ತಾನು ಮಾಡಿದ್ದಕ್ಕೆ ಬಾಡಿಗೆ ನೀಡುವ ವಿಚಾರದ ಬಗ್ಗೆ ಮಾಹಿತಿ ಪಡೆದುಕೊಂಡು ಅದನ್ನೂ ಪಾವತಿ ಮಾಡಲಾಗುತ್ತದೆ.

■ **ಉಮೇಶ್ ಕತ್ತಿ** | ಆಹಾರ ಸಚಿವ